




# ತಿರುಪತಿ ಆಶ್ರಮದಲ್ಲಿ ಎರಡು ಘಟಕಗಳ ಉದ್ಘಾಟನೆ

ತಿರುಪತಿ ರಾಮಕೃಷ್ಣ ಮಿಷನ್ ಆಶ್ರಮದಲ್ಲಿ ಅಕ್ಟೋಬರ್ ೨ ರಂದು ಎರಡು ಪ್ರಮುಖ ಘಟಕಗಳನ್ನು ಉದ್ಘಾಟಿಸಲಾಯಿತು. ೧) ವಿವೇಕಾನಂದ ಮಾನವ ಉತ್ಕೃಷ್ಟತಾ ಕೇಂದ್ರ (VCHE) ಹಾಗೂ ೨) ಉಚಿತ ಆಯುರ್ವೇದ ಚಿಕಿತ್ಸಾಲಯ.

### ವಿವೇಕಾನಂದ ಮಾನವ ಉತ್ಕೃಷ್ಟತಾ ಕೇಂದ್ರ

ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿನ ಸಹ ಕಾರ್ಯದರ್ಶಿಗಳಾದ ಸ್ವಾಮಿ ಬಲಭದ್ರಾನಂದಜಿಯರು VCHE (Vivekananda Centre of Human Excellence) ಘಟಕವನ್ನು ಉದ್ಘಾಟಿಸಿದರು. ಉದ್ಘಾಟನೆಯ ಬಳಿಕ ಅವರು ಮಾತನಾಡುತ್ತ, ವಿದ್ಯಾರ್ಥಿಗಳು ಸತ್ಯಸಂಧತೆ, ಸದ್ಗುಣ ಸಂಪನ್ನತೆ ಹಾಗೂ ಸಕಾರಾತ್ಮಕ ಗುಣಗಳ ಸಾಮರ್ಥ್ಯವನ್ನು ಸಂಪಾದಿಸುವುದಕ್ಕೆ ಒತ್ತು ನೀಡಿದರು. ಶ್ರೀರಾಮಕೃಷ್ಣರು ಮಥುರನಾಥನಿಗೆ ಸೇವೆ ಮಾಡಲು ಸಲಹೆ ನೀಡಿದ್ದನ್ನು ಉದ್ಧರಿಸುತ್ತ , ಸ್ವಾಮೀಜಿಯವರು ಸೇವಾಕಾರ್ಯದ ಮಹತ್ವವನ್ನು ವಿವರಿಸಿದರು. ಯುವಕರಿಗೆ VCHE ಕೇಂದ್ರವು ಆಧ್ಯಾತ್ಮಿಕ ಮೌಲ್ಯಗಳನ್ನಾಧರಿಸಿ ನೈತಿಕ ಜೀವನ ನಡೆಸಲು ನೆರವಾಗುವುದಾಗಿ ಸ್ವಾಮೀಜಿ ಆಶಿಸಿದರು.

### ಉಚಿತ ಆಯುರ್ವೇದ ಚಿಕಿತ್ಸಾಲಯ

ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಸತ್ಯಜ್ಞಾನಾನಂದಜಿ ಮಹಾರಾಜ್ ಚಿಕಿತ್ಸಾಲಯವನ್ನು ಉದ್ಘಾಟಿಸಿದರು. ಅವರು ವಿದ್ಯಾರ್ಥಿಗಳ ಹಾಗೂ ಭಕ್ತರ ಮೇಲೆ ದಿವ್ಯತ್ರಯರ ಕೃಪೆಯಿರಲಿ ಎಂದು ಹಾರೈಸುತ್ತಾ, ಯುವಕರ ತರಬೇತಿಗೆ VCHE ಕೇಂದ್ರವು ವಿಶೇಷವಾಗಿ ಶ್ರಮಿಸಿ ಯಶಸ್ಸು ಹೊಂದುವುದಾಗಿ ಆಶಿಸಿದರು.

### ಸಾರ್ವಜನಿಕ ಸಭೆ

ಕಾರ್ಯಕ್ರಮದ ಅಂಗವಾಗಿ ವಿವೇಕಾನಂದ ಸಭಾಂಗಣದಲ್ಲಿ ಸಾರ್ವಜನಿಕ ಸಭೆಯನ್ನು ಆಯೋಜಿಸಲಾಗಿತ್ತು. ಅತಿಥಿಗಳನ್ನು ಸ್ವಾಗತಿಸಿದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಸುಕೃತಾನಂದಜಿ ಮಹಾರಾಜ್ ಅವರು, VCHE ಕೇಂದ್ರದ ಯೋಜನೆ ಹಾಘೂ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಿಸಿದರು. ಸುತ್ತಮುತ್ತಣ ಯುವಜನತೆಗೆ ಕಂಪ್ಯೂಟರ್ ಕೌಶಲ್ಯ ಹಾಗೂ ಸ್ವಾಮಿ ವಿವೇಕಾನಂದರ ಬೋಧನೆಗಳಿಗೆ ಅನುಸಾರವಾಗಿ ಶೀಲವರ್ಧಕ ತರಬೇತಿ ನೀಡುವುದೇ ಈ ಸಂಸ್ಥೆಯ ಗುರಿಯಾಗಿದೆ ಎಂದರು.

ಪ್ರಸಿದ್ಧ ಆಯುರ್ವೇದ ತಜ್ಞರಾದ ಡಾ. ಪಿ. ಮುರಳೀಕೃಷ್ಣ ಅವರು ಆಯುರ್ವೇದದ ಸಮಗ್ರ ದೃಷ್ಟಿಕೋನದ ಬಗ್ಗೆ ವಿವರಿಸುತ್ತ, ಆಧುನಿಕ ವಿದ್ಯಾಭ್ಯಾಸದಲ್ಲಿ ಪ್ರಾಯೋಗಿಕ ಅನುಭವ ಹೊಂದಿರುವುದರ ಪ್ರಾಮುಖ್ಯತೆಯ ಬಗ್ಗೆ ಗಮನ ಸೆಳೆದರು.

ಸ್ವಾಮಿ ವಿಶ್ವರಾಜಾನಂದಜಿ ಭಾಷಣಕಾರರಿಗೆ ಸನ್ಮಾನ, ವಂದನಾರ್ಪಣೆಗಳನ್ನು ನೆರವೇರಿಸಿದರು. ಇದರೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.







Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020